# ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ, (ನಿ).ಮಂಡ್ಯ
## ಮಂಡ್ಯ ಜಿಲ್ಲೆ.

2020-21 ನೇ ಸಾಲಿಗೆ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಸುತ್ತಿರುವ ವಿವಿಧ ಯೋಜನೆಗಳಲ್ಲಿ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿರುವ ಫಲಾಪೇಕ್ಷಿಗಳಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು **ದಿನಾಂಕ: 27/10/2020 ರಂದು ಮಧ್ಯಾಹ್ನ 12-30 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣ** ಇಲ್ಲಿ, ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಜರುಗಿದ ಆಯ್ಕೆ ಸಮಿತಿ ಸಭೆಯ ನಡವಳಿಗಳು:

| ಕ್ರ.ಸಂ | ಸದಸ್ಯರು | ಪದನಾಮ | ಸಹಿ/- |
|---|---|---|---|
| 1 | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು | **ಹಾಜರಿ** |
| 2 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು | **ಹಾಜರಿ** |
| 3 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು | **ಹಾಜರಿ** |
| 4 | ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು | **ಹಾಜರಿ** |
| 5 | ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೈಗಾರಿಕಾ ಕೇಂದ್ರ | ಸದಸ್ಯರು | **ಹಾಜರಿ** |
| 6 | ಸಹಕಾರ ಸಂಘಗಳ ಉಪನಿಬಂಧಕರು | ಸದಸ್ಯರು | - |
| 7 | ಜನರಲ್ ಮ್ಯಾನೇಜರ್ (ಸೂಪರಿನ್‌ಟೆಂಡೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ | ಸದಸ್ಯರು | **ಹಾಜರಿ** |
| 8 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿ | ಸದಸ್ಯ ಕಾರ್ಯದರ್ಶಿ | **ಹಾಜರಿ** |

ಮೊದಲಿಗೆ ಆಯ್ಕೆ ಸಮಿತಿ ಸಭೆಯ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ವ್ಯವಸ್ಥಾಪಕರು, ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ) ಮಂಡ್ಯ ಜಿಲ್ಲೆ. ರವರು ಸಭೆಯಲ್ಲಿ ಹಾಜರಿದ್ದ ಆಯ್ಕೆ ಸಮಿತಿ ಸಭೆಯ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ಕ್ರಿಯಾ ಯೋಜನೆಯಲ್ಲಿ ಭೌತಿಕ 14 ಮತ್ತು ಆರ್ಥಿಕ 7.16 ಲಕ್ಷ ರೂಗಳನ್ನು ನಿಗಧಿಪಡಿಸಲಾಗಿದ್ದು, ಅದರಂತೆ ಪತ್ರಿಕಾ ಪ್ರಕಟಣೆ ಹೊರಡಿಸಿದನ್ವಯ ದಿನಾಂಕ: 05/09/2020 ರವರೆಗೆ ಕೊನೆಯ ದಿನಾಂಕದವರಗೆ ಕೆ.ಆರ್.ಪೇಟೆ ಹೊರತುಪಡಿಸಿ ಇನ್ನುಳಿದ 06 ಕ್ಷೇತ್ರಗಳಿಂದ ಒಟ್ಟು 181 ಅರ್ಜಿಗಳು ಸ್ವೀಕೃತಗೊಂಡಿದ್ದು, ಅದರಂತೆ ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ ವಿಧಾನಸಭಾವಾರು ಹಾಗೂ ಯೋಜನಾವಾರು ಪಟ್ಟಿ ಮಾಡಿ ಆಯ್ಕೆಸಮಿತಿ ಮುಂದೆ ಮಂಡಿಸಲಾಯಿತು. ಯೋಜನಾವಾರು ನಿಗಧಿಪಡಿಸಿದ ಗುರಿಯನ್ವಯ ಉಪ್ಪಾರ ಮತ್ತು ಇದರ ಉಪಜಾತಿಗಳಲ್ಲಿ ಮಹಿಳೆಯರಿಗೆ 33% ಹಾಗೂ ಅಂಗವಿಕಲರಿಗೆ 5% ಅದರಲ್ಲಿ ಮಹಿಳಾ ಅಂಗವಿಲರಿಗೆ 2.5% ಕಡ್ಡಾಯವಾಗಿ ಆದ್ಯತೆ ನೀಡಿ ಅರ್ಹ ಫಲಾಪೇಕ್ಷಿಗಳನ್ನು ಆಯ್ಕೆ ಮಾಡುವಂತೆ ಸಭೆಯನ್ನು ಕೋರಿದರು.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ
ನಿಯಮಿತ, ಮಂಡ್ಯ ಜಿಲ್ಲೆ ಮಂಡ್ಯ.

## <u>ಸ್ವಯಂ ಉದ್ಯೋಗ ನೇರಸಾಲ ಯೋಜನೆ:-</u>

ಬ್ಯಾಂಕುಗಳ ಮೂಲಕ ಸಾಲ ಪಡೆಯಲು ಅಶಕ್ತರಾಗಿರುವ ಉಪ್ಪಾರ ಮತ್ತು ಇದರ ಉಪಜಾತಿಯವರು ಕೈಗೊಳ್ಳುವ ಸಾಂಪ್ರದಾಯಿಕ ವೃತ್ತಿಯಲ್ಲದ ಆರ್ಥಿಕ ಚಟುವಟಿಕೆಗಳಿಗೆ ನಿಗಮದಿಂದ ಘಟಕ ವೆಚ್ಚ ರೂ.50,000/-ಗಳಿಗೆ ಶೇ.30 ರಷ್ಟು ಗರಿಷ್ಠ ರೂ. 10,000/ ಗಳ ಸಹಾಯಧನ ಉಳಿಕೆ ಶೇ.70% ರಷ್ಟು ರೂ. 40,000/- ಶೇ 4%ರ ಬಡ್ಡಿದರದಲ್ಲಿ ಸಾಲ , ಹಾಗೂ ಘಟಕ ವೆಚ್ಚ ರೂ.50,001/- ರಿಂದ ರೂ. 1,00,000/- ಗಳವರೆಗೆ ಶೇ. 20% ರಷ್ಟು ಗರಿಷ್ಠ ರೂ. 20,000/-ಗಳ ಸಹಾಯಧನ ಉಳಿಕೆ ಶೇ.80 ರಷ್ಟು ರೂ. 80,000/- ರೂಗಳನ್ನು ಶೇ. 4% ರ ಬಡ್ಡಿ ದರದಲ್ಲಿ ಸಾಲ ಹಾಗೂ ಘಟಕ ವೆಚ್ಚ ರೂ.1,00,001/- ರಿಂದ ರೂ 2,00,000/-ಗಳವರೆಗೆ ಶೇ.15 ರಷ್ಟು ಕನಿಷ್ಠ ರೂ 20,000/-ಗಳ ಗರಿಷ್ಠ ರೂ. 30,000/- ಸಹಾಯಧನ ಉಳಿಕೆ ಶೇ.85 ರಷ್ಟು ರೂ. 1,70,000/-ಗಳನ್ನು ಶೇ.4 ರ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡಲಾಗುವುದೆಂದು ಯೋಜನೆಯ ಬಗ್ಗೆ ಸಂಕ್ಷಿಪ್ತವಾಗಿ ಸಮಿತಿ ಸಭೆಗೆ ವಿವರಿಸಿದರು.

ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಲ್ಲಿ ಮಂಡ್ಯ ಜಿಲ್ಲೆಗೆ **ಭೌತಿಕ 12 ಮತ್ತು ಆರ್ಥಿಕ ರೂ 6.00** ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ. ಕೆ.ಆರ್.ಪೇಟೆ ಹೊರತುಪಡಿಸಿ ಇನ್ನುಳಿದ ಆರು ಕ್ಷೇತ್ರಗಳಿಂದ ಒಟ್ಟು 181 ಅರ್ಜಿಗಳು ಸ್ವೀಕೃತಗೊಂಡಿದ್ದು, ನಿಯಮಾನುಸಾರ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವಂತೆ ಸಭೆಯನ್ನು ಕೋರಿದರು.

**ತೀರ್ಮಾನ:-**

ಈ ಯೋಜನೆಯಡಿ ಸೌಲಭ್ಯ ಕೋರಿ ನಿಗಧಿತ ಗುರಿಗಿಂತ ಅತಿ ಹೆಚ್ಚು ಅರ್ಜಿಗಳು ಸ್ವೀಕೃತಗೊಂಡಿರುವುದನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿತು. ಆಯ್ಕೆ ಸಮಿತಿ ಅಧ್ಯಕ್ಷರು ನಿಗಧಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಗಿಂತ ಹೆಚ್ಚುವರಿಯಾಗಿ 06 ವಿಧಾನಸಭಾ ಕ್ಷೇತ್ರಗಳಡಿ ಮಹಿಳೆಯರಿಗೆ, ವಿಧವೆಯರಿಗೆ, ಅಂಗವಿಕಲರಿಗೆ ಹಾಗೂ ವಯೋಮಿತಿ ಅಂಚಿನಲ್ಲಿರುವವರಿಗೆ ಆದ್ಯತೆ ನೀಡುವಂತೆ ಸಭೆಗೆ ಸೂಚಿಸಿದರು.

ಈ ಸಂಬಂಧ ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿ ಆರು ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಒಟ್ಟು 12 ಮಂದಿಗೆ ಇವರು ಕೈಗೊಳ್ಳುವ ಚಟುವಟಿಕೆಗಳಗನುಸಾರ ತಲಾ 50000/- ರೂಗಳಂತೆ **ಸಹಾಯಧನ 10,000/- ರೂ. ಸಾಲ 40,000/- ರೂ. ಹೀಗೆ ಒಟ್ಟಾರೆಯಾಗಿ 12 ಫಲಾನುಭವಿಗಳಿಗೆ ಸಹಾಯಧನ ರೂ. 1,20,000/- ಗಳು ಮತ್ತು ಸಾಲದ ಮೊತ್ತ 4,80,000/- ರೂ.ಗಳು ಹೀಗೆ ಒಟ್ಟು ಮೊತ್ತ 6,00,000/- ರೂ**ಗಳು. ಹಾಗೂ ಹೆಚ್ಚುವರಿಯಾಗಿ 06 ಮಂದಿಗೆ ಒಟ್ಟು ಸಾಲ ಮತ್ತು ಸಹಾಯಧನದ ಮೊತ್ತ 3,00,000 ರೂಗಳನ್ನು ಮಂಜೂರು ಮಾಡಿ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಹಾಗೂ ಸದಸ್ಯ ಕಾರ್ಯದರ್ಶಿಗಳಿಗೆ ಆದೇಶ ಪ್ರತಿಗೆ ಸಹಿ ಮಾಡುವ ಅಧಿಕಾರ ನೀಡಿತು.

ಆಯ್ಕೆ ಸಮಿತಿ ಆಯ್ಕೆ ಮಾಡಿರುವ ಫಲಾನುಭವಿಗಳ ಪಟ್ಟಿಯನ್ನು ಅನುಬಂಧ (1)ರಲ್ಲಿ ಪಟ್ಟಿ ಮಾಡಿ ಲಗತ್ತಿಸಿದೆ.

## <u>ಶೈಕ್ಷಣಿಕ ಸಾಲ ಯೋಜನೆ:-</u>

ಹಿಂದುಳಿದ ವರ್ಗಗಳ ಪ್ರ-1 ರಲ್ಲಿ ಬರುವ ಉಪ್ಪಾರ ಮತ್ತು ಇದರ ಉಪಜಾತಿಗಳಿಗೆ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳು ಮತ್ತು ಉನ್ನತ ವ್ಯಾಸಂಗಕ್ಕೆ ಸರ್ಕಾರದ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಸೀಟು ಪಡೆದು ಇಂಜಿನಿಯರಿಂಗ್, ವೈದ್ಯಕೀಯ, ಡೆಂಟಲ್, ಕಂಪ್ಯೂಟರ್, ಚಾರ್ಟೆಡ್ ಅಕೌಂಟೆಂಟ್, ಎಂ.ಬಿ.ಎ. ಹೋಟೆಲ್ ಮ್ಯಾನೇಜ್‌ಮೆಂಟ್, ಪಶುವೈದ್ಯಕೀಯ, ಕಾನೂನು, ಐ.ಸಿ.ಡಬ್ಲ್ಯೂ.ಎ., ಮುಂತಾದ ಎ.ಐ.ಸಿ.ಟಿ. ಇಂದ , ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ, ಮತ್ತು ಯು.ಜಿ.ಸಿ. ಯಿಂದ ಅನುಮೋದಿತ ಕೋರ್ಸ್‌ಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ವ್ಯಾಸಂಗ ಮಾಡುವ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ
ನಿಯಮಿತ, ಮಂಡ್ಯ ಜಿಲ್ಲೆ ಮಂಡ್ಯ.

ವಿದ್ಯಾರ್ಥಿಗಳ ವ್ಯಾಸಂಗಕ್ಕೆ ವಾರ್ಷಿಕ 1.00 ಲಕ್ಷಗಳಂತೆ ಕೋರ್ಸ್ ಅವಧಿಗೆ ಗರಿಷ್ಟ 4.00 ಲಕ್ಷದಿಂದ 5.00 ಲಕ್ಷದ ವರೆಗೆ ವಾರ್ಷಿಕ 2% ಬಡ್ಡಿ ದರದಲ್ಲಿ ಆರ್ಥಿಕ ನೆರವು ಒದಗಿಸುವುದು.

ಈ ಯೋಜನೆಯಡಿ ಮಂಡ್ಯ ಜಿಲ್ಲೆಗೆ ಭೌತಿಕ **02 ಆರ್ಥಿಕ 1.16** ಲಕ್ಷ ಗುರಿ ನಿಗಧಿಪಡಿಸಲಾಗಿದ್ದು, ಈ ಯೋಜನೆಯಡಿ ಯಾವುದೇ ಅರ್ಜಿಗಳು ಸ್ವೀಕೃತಗೊಂಡಿರುವುದಿಲ್ಲ ಎಂದು ಸಭೆಗೆ ವಿವರಿಸಿದರು.

**ತೀರ್ಮಾನ:**

ಈ ಯೋಜನೆಯಡಿ ಯಾವುದೇ ಅರ್ಜಿಗಳು ಸ್ವೀಕೃತಗೊಂಡಿಲ್ಲದಿರುವುದನ್ನು ಸಭೆಯ ಕೂಲಂಕಷವಾಗಿ ಪರಿಶೀಲಿಸಿ, ಈ ಯೋಜನೆಯಡಿ ಸೌಲಭ್ಯ ಕೋರಿ ಮುಂದೆ ಅರ್ಜಿಗಳು ಸ್ವೀಕೃತಗೊಂಡಲ್ಲಿ ಮಾನ್ಯ ಅಧ್ಯಕ್ಷರ ಅನುಮೋದನೆಯೊಂದಿಗೆ ಆಯ್ಕೆಗೆ ಪರಿಗಣಿಸಿ ಮುಂದೆ ನಡೆಯುವ ಆಯ್ಕೆ ಸಮಿತಿ ಸಭೆಯಲ್ಲಿ ಅನುಸಮರ್ಥನೆ ಪಡೆಯುವಂತೆ ಸದಸ್ಯ ಕಾರ್ಯದರ್ಶಿಯವರಿಗೆ ಸಭೆಯು ಸೂಚಿಸಿತು.

ನಂತರ ಬೇರೆ ವಿಷಯಗಳಿಲ್ಲದೆ ಸಭೆಯನ್ನು ವಂದನಾಪೂರ್ವಕವಾಗಿ ಮುಕ್ತಾಯಗೊಳಿಸಲಾಯಿತು.

| | |
|---|---|
| ಜಿಲ್ಲಾ ವ್ಯವಸ್ಥಾಪಕರು<br>ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ, ಮಂಡ್ಯ ಜಿಲ್ಲೆ ಮಂಡ್ಯ. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ<br>ಜಿಲ್ಲಾ ಪಂಚಾಯತ್ ಮಂಡ್ಯ |
| **ಸದಸ್ಯ ಕಾರ್ಯದರ್ಶಿ<br>ಆಯ್ಕೆ ಸಮಿತಿ ಸಭೆ ಹಾಗೂ<br>ಜಿಲ್ಲಾ ವ್ಯವಸ್ಥಾಪಕರು<br>ಡಿ.ಬಿ.ಸಿ.ಡಿ.ಸಿ. ಮಂಡ್ಯ ಜಿಲ್ಲೆ,** | **ಅಧ್ಯಕ್ಷರು<br>ಆಯ್ಕೆ ಸಮಿತಿ ಸಭೆ ಹಾಗೂ<br>ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,<br>ಜಿಲ್ಲಾ ಪಂಚಾಯತ್ ಮಂಡ್ಯ** |